International Journal of Multidisciplinary Trends

**E-ISSN:** 2709-9369
**P-ISSN:** 2709-9350
www.multisubjectjournal.com
IJMT 2022; 4(2): 95-99
Received: 13-06-2022
Accepted: 15-07-2022

**ಭೀಮಣ್ಣ ಪೋಮಣ್ಣ ಲಮಾಣಿ**
ಸಂಶೋಧನಾ ವಿಧ್ಯಾರ್ಥಿ
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ, ಕರ್ನಾಟಕ, ಭಾರತ

**ಡಾ. ಶಹತಾಜ್ ಬೇಗಂ**
ಮಾರ್ಗದರ್ಶಕರು, ಸಹ
ಪ್ರಾಧ್ಯಾಪಕರು
ಕರ್ನಾಟಕ ವಿಶ್ವವಿದ್ಯಾಲಯ ಶಿಕ್ಷಣ
ಮಹಾವಿದ್ಯಾಲಯ, ಧಾರವಾಡ,
ಕರ್ನಾಟಕ, ಭಾರತ

**Corresponding Author:**
**ಭೀಮಣ್ಣ ಪೋಮಣ್ಣ ಲಮಾಣಿ**
ಸಂಶೋಧನಾ ವಿಧ್ಯಾರ್ಥಿ
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ, ಕರ್ನಾಟಕ, ಭಾರತ

# ಬಂಜಾರ ಸಮುದಾಯದ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳು: ಒಂದು ಅಧ್ಯಯನ

**ಭೀಮಣ್ಣ ಪೋಮಣ್ಣ ಲಮಾಣಿ, ಡಾ. ಶಹತಾಜ್ ಬೇಗಂ**

**ಅಮೂರ್ತ**
ಕರ್ನಾಟಕದಲ್ಲಿ ವಾಸಿಸುತ್ತಿರುವ ಹಲವಾರು ಬುಡಕಟ್ಟು ಜನಾಂಗಗಳಲ್ಲಿ ಬಂಜಾರ ಬುಡಕಟ್ಟು ಒಂದು ಜನಪ್ರೀಯ ಬುಡಕಟ್ಟಾಗಿದೆ. ಬಂಜಾರ ಸಮುದಾಯದವರು ಕಾಡು, ಮೇಡು, ಗುಡ್ಡಗಾಡುಗಳಲ್ಲಿ ವಾಸಿಸುತ್ತಾ ತಮ್ಮ ಜೀವನವನ್ನು ನಡೆಸುತ್ತಿರುವುದನ್ನು ಕಂಡಿದ್ದೆವೆ. ಬಂಜಾರರು ಪ್ರತ್ಯೇಕ ತಾಂಡಾಗಳನ್ನು ರಚಿಸಿಕೊಂಡು ತಮ್ಮದೇ ಆದ ಸಂಸ್ಕೃತಿ, ಸಂಪ್ರದಾಯ, ಹಬ್ಬ ಹರಿದಿನಗಳ ಆಚರಣೆ ಹಾಗೂ ತಮ್ಮ ನ್ಯಾಯ ಪಂಚಾಯತಿಯನ್ನು ಉಳಿಸಿಕೊಂಡು ಬರುವಲ್ಲಿ ಯಶಸ್ವಿಯಾಗಿದ್ದಾರೆ. ಬಂಜಾರರನ್ನು ಲಮಾಣಿ, ಲಂಬಾಡಿ, ಬಂಜಾರೀ, ಸುಗಾಲಿ, ಬಣಜಾರ, ಡಾಡಿ ಇತ್ಯಾದಿ ಹೆಸುರುಗಳಿಂದ ಕರೆಯುತ್ತಾರೆ. ಯಾವುದೇ ಸಮುದಾಯವು ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಮಹತ್ವವನ್ನು ಪಡೆಯಬೇಕಾದರೆ ಸಮುದಾಯವು ಸಾಮಾಜಿಕವಾಗಿ ಮತ್ತು ಶೈಕ್ಷಣಿಕದ ಅಂತಸ್ತು ಬಹಳ ಮುಖ್ಯವಾಗಿರುತ್ತದೆ. ಇಂದು ಸಮಾಜದ ಎಲ್ಲಾ ವಲಯಗಳಲ್ಲೂ ಶಿಕ್ಷಣದ ಮಹತ್ವ ಎದ್ದು ಕಾಣುತ್ತಿದೆ. ಸಮುದಾಯದಲ್ಲಿ ಪರಸ್ಪರ ವಿಶ್ವಾಸ, ಹೊಂದಾಣಿಕೆ, ಒಗ್ಗಟ್ಟು ಬೆಳೆಯಬೇಕಾದರೆ ಶಿಕ್ಷಣದ ಅನಿವಾರ್ಯತೆ ಅಗತ್ಯವಾಗಿದೆ. ಬಂಜಾರ ಸಮುದಾಯದ ಮಕ್ಕಳು ಸರ್ಕಾರದ ವಿವಿಧ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವುದನ್ನು ನೋಡಬಹುದು. ಅದೇ ರೀತಿ ಸಮುದಾಯದ ಮಹಿಳೆಯರು ತಮ್ಮ ಸಂಪ್ರದಾಯದ ಕಸೂತಿ ಕಲೆಗೆ ಆದ್ಯತೆ ನೀಡುತ್ತಿರುವುದು ಕಂಡುಬರುತ್ತದೆ. ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ಒಟ್ಟು 500 ಮಾಹಿತಿದಾರರನ್ನು ನಗರ ಮತ್ತು ಗ್ರಾಮೀಣ ಪ್ರದೇಶದಿಂದ ಆಯ್ಕೆ ಮಾಡಿಕೊಂಡಿದ್ದು, ಇವರ ಪ್ರಸ್ತುತ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಅರಿಯಲು ಪ್ರಶ್ನಾವಳಿಗಳ ಮೂಲಕ ಸಮೀಕ್ಷಾ ವಿಧಾನವನ್ನು ಅನುಸರಿಸಿ ದತ್ತಾಂಶಗಳನ್ನು ಸಂಗ್ರಹಿಸಲಾಯಿತು.

**ಕೀ ಪದಗಳು:** ಬಂಜಾರರ ಇತರೆ ನಾಮಗಳು, ಬಂಜಾರ ಸಮುದಾಯದ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳು

## ಪೀಠಿಕೆ

ಕರ್ನಾಟಕದಲ್ಲಿ ವಾಸಿಸುತ್ತಿರುವ ಅನೇಕ ಬುಡಕಟ್ಟುಗಳಲ್ಲಿ ಬಂಜಾರ ಬುಡಕಟ್ಟು ಒಂದಾಗಿದೆ. ಬಂಜಾರರನ್ನು ಲಮಾನ್, ಲಮಾನಿ, ಲಮಾಣಿ, ಲಂಬಾಣಿ, ಲಂಬಾಡಾ, ಲಬಾನಿ, ಬಂಜಾರ, ಬಣಜಾರ, ಸಖಾಲಿ, ಸುಗಾಲಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಆರ್ಥಿಕ ಭದ್ರತೆಯು, ಶೈಕ್ಷಣಿಕ ಮತ್ತು ಸಾಮಾಜಿಕ ಪ್ರಗತಿಗೆ ಬುನಾದಿಯಾಗುತ್ತದೆ. ಕೃಷಿ ಅಲ್ಲದೇ ವ್ಯಾಪಾರ, ವಾಣಿಜ್ಯ ಹಾಗೂ ಮತ್ತಿತರ ಚಟುವಟಿಕೆಗಳು ಆ ಪ್ರದೇಶದ ಒಟ್ಟು ಆಂತರಿಕ ಶಕ್ತಿ ಮತ್ತು ಬಾಹ್ಯ ರೂಪವನ್ನು ಪ್ರತಿನಿಧಿಸುತ್ತದೆ. ಅದೇ ರೀತಿ ಸಮುದಾಯದ ಮಹಿಳೆಯರು ತಮ್ಮ ಸಂಪ್ರದಾಯದ ಕಸೂತಿ ಕಲೆಗೆ ಆದ್ಯತೆ ನೀಡುತ್ತಿರುವುದು ಕಂಡುಬರುತ್ತದೆ.

"ವಿದ್ಯೆಯು ಸಾಧಕರ ಸ್ವತ್ತೇ ಹೊರತು ಸೋಮಾರಿಯ ಸ್ವತ್ತಲ್ಲ" ಸದಾ ಕಾರ್ಯತತ್ಪರಾದವರಿಗೆ ಕಣ್ಣೀರಿಡಲೂ ಸಮಯವೇ ಸಿಗದು. "ವಿದ್ಯೆ ಕಲಿಸದ ತಂದೆ, ಬುದ್ದಿ ಹೇಳದ ಗುರುವು, ಬಿದ್ದಿರಲು ಬಂದು ನೋಡದ ತಾಯಿಯು ಶುದ್ಧ ವೈರಿಗಳು ಸರ್ವಜ್ಞ" ಎಂಬಂತೆ, ಶಿಕ್ಷಣವೇ ಶಕ್ತಿ, ವಿದ್ಯೆ ಎಂಬುದು ಪ್ರತಿಯೊಬ್ಬ ಮಗುವಿನ ಮೂಲಭೂತ ಹಕ್ಕು, ಮುಂತಾದ ಮೌಲ್ಯಯುತ ವಾಕ್ಯಗಳನ್ನು ಅರಿತಾಗ ವಿದ್ಯೆಯ ಮಹತ್ವ ಅರಿವಾಗುತ್ತದೆ. ಆದ್ದರಿಂದ ಶಿಕ್ಷಣವೇ ಪ್ರಗತಿಗೆ ಆಧಾರಸ್ತಂಭ ಎಂದು ಹೇಳುವುದರಲ್ಲಿ ಹುರುಳಿಲ್ಲ. ವಿದ್ಯೆ ಇಂದು ಪ್ರತಿಯೊಬ್ಬ ಪ್ರಜೆಯು ಪಡೆಯಲೇಬೇಕಾದ ಕನಿಷ್ಟ ಸವಲತ್ತು. ವಿದ್ಯೆ ಮನುಷ್ಯನಿಗೆ ಒಂದು ರೀತಿಯಲ್ಲಿ ತನ್ನ ಜೀವನೋಪಾಯದ ಗುರಿಯನ್ನು ತಲುಪಲು ಒಂದು ಸಾಧನವೂ ಹೌದು. ಶಿಕ್ಷಣ ಪಡೆಯಲು ನೂರಾರು ದಾರಿಗಳು ಹಾಗೂ ಅವಕಾಶಗಳು ಇವೆ. ಬದಲಾಗಿ ಅದನ್ನು ಪಡೆಯುವ ಬಯಕೆ ಇರಬೇಕು, ಹಾಗೂ ಪಡೆದ ನಂತರ ಸಾಧಿಸುವ ಛಲವಿರಬೇಕು. ಹಾಗಾಗಿ ಬಂಜಾರ ಸಮುದಾಯದವರು ಜಾಗೃತರಾಗಿ ಭವಿಷ್ಯದ ಬಗ್ಗೆ

ಯೋಚಿಸಬೇಕಾಗಿದೆ. ಶೈಕ್ಷಣಿಕವಾಗಿ ತುಂಬಾ ಮುಂದುವರಿಯಲೇಬೇಕಾದ ಪರಿಸ್ಥಿತಿ ಇದೆ. ಶಿಕ್ಷಣದ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳಬೇಕೆಂದರೆ ಅದರ ಸಂಕುಚಿತ ಮತ್ತು ವಿಶಾಲಾರ್ಥಕ್ಕೆ ದಾರ್ಶನಿಕರು, ಮನೋವಿಜ್ಞಾನಿಗಳು ಹಾಗೂ ಶಿಕ್ಷಣ ತಜ್ಞರು ತಮ್ಮದೇ ಆದ ಜ್ಞಾನದ ದೃಷ್ಟಿಯಿಂದ ತಿಳಿಸುವಂತಹ ಪ್ರಯತ್ನ ಮಾಡಿದ್ದಾರೆ.

**ಸಾಹಿತ್ಯಾವಲೋಕನ**

- ಡಾ. ಹರಿಲಾಲ ಪವಾರ ಇವರು ಲಂಬಾಣಿಗರ ಮದುವೆ ಸಂಪ್ರದಾಯಗಳು ಎಂಬ ಕೃತಿ (1996) ಯನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಲಂಬಾಣಿಗರ ಮದುವೆ ಸಂಪ್ರದಾಯಗಳಿಗೆ ಸಂಬಂಧಪಟ್ಟ ಸಕಲ ಮಾಹಿತಿಯನ್ನು ನೀಡಿದ್ದಾರೆ, ಹಾಗೂ ಲಂಬಾಣಿಗರ ಹೋಳಿಹಬ್ಬ ಎಂಬ ಕೃತಿಯನ್ನು ಶಶಿ ಪ್ರಕಾಶನ, ಧಾರವಾಡದಲ್ಲಿ ಪ್ರಕಟಗೊಂಡಿದೆ. ಈ ಕೃತಿಯಲ್ಲಿ ಕ್ಷೇತ್ರಕಾರ್ಯದ ಮೂಲಕ ಅನೇಕ ಬಂಜಾರ ಹಾಡುಗಳನ್ನು ಸಂಗ್ರಹಿಸಿ ಬರೆದಿದ್ದಾರೆ.
- ಸಣ್ಣರಾಮನಾಯಕ್, 'ಲಂಬಾಣಿ ಸಂಸ್ಕೃತಿ–ಒಂದು ಸಾಂಸ್ಕೃತಿಕ ಅಧ್ಯಯನ' (1999): ತಮ್ಮ ಸಂಶೋಧನಾ ವರದಿಯಲ್ಲಿ ಲಂಬಾಣಿ ಸಂಸ್ಕೃತಿಯ ವಿವಿಧ ಆಯಾಮಗಳ ಕುರಿತು ವಿವರಿಸುತ್ತಾ ಸಂಸ್ಕೃತಿಕ ಅಂಶಗಳನ್ನು ಮಾತ್ರ ಪರಿಗಣಿಸಿ ರಾಜಕೀಯ ಅಂಶಗಳನ್ನು ನಿರ್ಲಕ್ಷಿಸಿರುತ್ತಾರೆ. ಆದರೆ ಈ ಸಮುದಾಯದ ಅಭಿವೃದ್ಧಿ ಮಾರ್ಪಾಟುಗಳು ಪ್ರಾದೇಶಿಕ ಬಲದಾವಣೆಗಳ ಮತ್ತು ಮಾನವಶಾಸ್ತ್ರ ಸಾಹಿತ್ಯವನ್ನು ಸಮೃದ್ಧಿಗೊಳಿಸಿರುವುದರ ಬಗ್ಗೆ ಬೆಳಕು ಚೆಲ್ಲಿರುತ್ತಾರೆ.
- ಡಾ. ಡಿ. ಬಿ. ನಾಯಕ, 'ಲಂಬಾಣಿ ಜನಪದ ಸಾಹಿತ್ಯ ಸಮಾಜೋ–ಸಾಂಸ್ಕೃತಿಕ ಅಧ್ಯಯನ' (2000): ಇವರು ತಮ್ಮ ಸಂಶೋಧನೆಯಲ್ಲಿ "ಬಂಜಾರರ ಮೂಲ ಇತಿಹಾಸ, ಬಂಜಾರರ ಸಾಮಾಜಿಕ ವ್ಯವಸ್ಥೆ, ಧಾರ್ಮಿಕ ಆಚರಣೆಗಳು, ಆರ್ಥಿಕ ವ್ಯವಸ್ಥೆ ಮತ್ತು ಅವರ ಜೀವನವಿಧಾನಗಳು, ಕಥೆಗಳು, ರಾಜಕೀಯ ವ್ಯವಸ್ಥೆಯಲ್ಲಿ ಅವರ ಹಿಂದುಳಿದಿರುವಿಕೆಗೆ ಕಾರಣಗಳು, ಬಂಜಾರರ ಶ್ರೀಮಂತ ಕಲೆ ಮತ್ತು ಕಸೂತಿ ಸಾಹಿತ್ಯದ ಬಗ್ಗೆ ತಿಳಿಸಿದ್ದಾರೆ. ಹಾಗೂ ಲಿಪಿ ಇಲ್ಲದ ಭಾಷೆಯ ಮಹತ್ವ, ಬಂಜಾರ ಜಾನಪದ ಗೀತೆಗಳು, ಆ ಗೀತೆಗಳ ವರ್ಗೀಕರಣ, ಬಂಜಾರರ ಸಂಸ್ಕಾರ ಗೀತೆಗಳಾಗಿರಬಹುದು, ಧಾರ್ಮಿಕ ಗೀತೆಗಳಾಗಿರಬಹುದು, ಶ್ರಮಗೀತೆಗಳಾಗಿರಬಹುದು, ಶೃಂಗಾರ ಗೀತೆಗಳಾಗಿರಬಹುದು, ತಮ್ಮ ನೃತ್ಯ ಗೀತೆಗಳಾಗಿರಬಹುದು ಹಾಗೂ ಶಿಶುಪ್ರಾಸ ಗೀತೆಗಳಾಗಿಬಹುದು, ಈ ಎಲ್ಲವೂ ವಿಶಿಷ್ಟ ರೀತಿಯಲ್ಲಿ ಕಂಡುಬರುತ್ತವೆ ಎಂದು ತಿಳಿಸಿರುತ್ತಾರೆ.
- ಡಾ. ಸಿ.ಆರ್. ಗೋಪಾಲ್, 'ಉತ್ಕ್ರಾಂತಿಯತ್ತ ಲಂಬಾಣಿಗಳು' (2010): ಎಂಬ ಮಹಾಪ್ರಬಂಧವನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿ ಪಿಎಚ್.ಡಿ ಪದವಿಯನ್ನು ಪಡೆದುಕೊಂಡಿದ್ದಾರೆ. ಇವರ ಸಂಶೋಧನೆಯ ರಚನೆಯಲ್ಲಿ ತಿಳಿಸಿರುವಂತೆ ಲಂಬಾನಿಗರು ಸ್ವಾತಂತ್ರ್ಯ ನಂತರ ಅನೇಕ ಸರ್ಕಾರಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ಜನಾಂಗಗಳ ಅಭಿವೃದ್ಧಿಗಾಗಿ ಅನೇಕ ಉತ್ತಮ ಕಾರ್ಯಕ್ರಮಗಳನ್ನು ಪ್ರಾರಂಭಿಸಿವೆ. 1950–51ರಲ್ಲಿ ಪ್ರಾರಂಭವಾದ ವಿಶೇಷ ಘಟಕ ಯೋಜನೆ ಸದರಿ ಉದ್ದೇಶಕ್ಕಾಗಿ ಪ್ರಾರಂಭಗೊಂಡ ಯೋಜನೆಯಲ್ಲಿ ತುಂಬಾ ಮುಖ್ಯವಾದುದು ಹಾಗೂ ವಿಶೇಷ ಘಟಕ ಯೋಜನೆ ಎಲ್ಲಾ ಜನರಿಗೆ ತಲುಪುವ ಹಾಗೆ ಯಾವ ಯಾವ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ತಮ್ಮ ಸಂಶೋಧನೆಯಲ್ಲಿ ವಿವರಣಾತ್ಮಕ, ವಿಶ್ಲೇಷಣಾತ್ಮಕ ಸಂಶೋಧನಾ ವಿಧಾನವನ್ನು ಅಳವಡಿಸಿಕೊಂಡಿದ್ದಾರೆ. ಅಷ್ಟೇ ಅಲ್ಲದೇ ಲಂಬಾಣಿಗರ ಮೂಲ, ಹಿನ್ನೆಲೆ, ವೃತ್ತಿ, ಭಾಷೆ, ವೇಷಭೂಷಣಗಳು, ಆಭರಣಗಳು, ನ್ಯಾಯ ಪಂಚಾಯತಿ, ಶೈಕ್ಷಣಿಕ ಪ್ರಗತಿ ಹಾಗೂ ಕೇಂದ್ರ ಮತ್ತು ರಾಜ್ಯ ಸರಕಾರಗಳ ಕಾರ್ಯಕ್ರಮಗಳ ಬಗ್ಗೆ ಸಿವಿವರವಾಗಿ ತಿಳಿಸಿದ್ದಾರೆ.
- ಲೋಕೇಶ ನಾಯ್ಕ.ಬಿ., "ಕರ್ನಾಟಕದಲ್ಲಿನ ಲಂಬಾಣಿ ಸಮುದಾಯದ ಮಹಿಳಾ ಸಬಲೀಕರಣದಲ್ಲಿ ಶಿಕ್ಷಣದ ಪಾತ್ರ": ಒಂದು ಅಧ್ಯಯನ (2020): ಎಂಬ ಮಹಾಪ್ರಬಂಧಕ್ಕೆ ತುಮಕೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ. ಇವರ ಸಂಶೋಧನೆಯಲ್ಲಿ ಲಂಬಾಣಿ ಮಹಿಳೆಯರ ಶಿಕ್ಷಣದ ಬಗ್ಗೆ ಸಮಗ್ರವಾಗಿ ವಿವರಿಸಿದ್ದಾರೆ. ಪ್ರಸ್ತುತ ಲಂಬಾಣಿ ಸಮುದಾಯದ ಮಹಿಳೆಯರು ಯಾವ ಯಾವ ಕ್ಷೇತ್ರದಲ್ಲಿ ಸಬಲೀಕರಣ ಹೊಂದುತ್ತಿದ್ದಾರೆ ಮತ್ತು ಬಂಜಾರ ಸಮುದಾಯದ ಸಂಸ್ಕೃತಿ ಸಂಪ್ರದಾಯಗಳ ಬಗ್ಗೆ ಸವಿವರವಾಗಿ ವಿವರಣೆ ನೀಡಿದ್ದಾರೆ. ಬಂಜಾರ ಮಹಿಳೆಯರು ಪುರುಷರ ಸಮಾನರಾಗಿ ಶಿಕ್ಷಣವನ್ನು ಪಡೆಯುತ್ತಿರುವುದನ್ನು ತಮ್ಮ ಅಧ್ಯಯನದಲ್ಲಿ ತಿಳಿಸಿರುತ್ತಾರೆ. ಹಾಗಾಗಿ ಲಂಬಾಣಿ ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ಸಬಲೀಕರಣ ಹೊಂದಲು ಇನ್ನು ಹೆಚ್ಚಿನ ಅಧ್ಯಯನಗಳು ನಡೆಯಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

**ಅಧ್ಯಯನದ ಉದ್ದೇಶಗಳು**

- ಬಂಜಾರ ಸಮುದಾಯದ ನಗರ ಮತ್ತು ಗ್ರಾಮೀಣ ಪ್ರದೇಶದ ಮಾಹಿತಿದಾರರು ಸರ್ಕಾರದ ಅನುದಾನವನ್ನು ಪಡೆದುಕೊಂಡು ಶೌಚಾಲಯಗಳನ್ನು ನಿರ್ಮಿಸಿಕೊಂಡಿರುವುದರ ಕುರಿತು ಅಧ್ಯಯನ ಮಾಡುವುದು.
- ಬಂಜಾರ ಸಮುದಾಯದ ನಗರ ಮತ್ತು ಗ್ರಾಮೀಣ ಪ್ರದೇಶದ ಮಾಹಿತಿದಾರರು ತಮ್ಮ ಸಂಪ್ರದಾಯದ ಕಸೂತಿ ಕಲೆಯ ಬಗ್ಗೆ ಆಸಕ್ತಿ ಹೊಂದಿರುವದರ ಕುರಿತು ಅಧ್ಯಯನ ಮಾಡುವುದು.
- ಬಂಜಾರ ಸಮುದಾಯದ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವಯಸ್ಕರರ ಶಿಕ್ಷಣದ ಸೌಲಭ್ಯದ ಕುರಿತು ಅಧ್ಯಯನ ಮಾಡುವುದು.
- ಬಂಜಾರ ಸಮುದಾಯದ ನಗರ ಮತ್ತು ಗ್ರಾಮೀಣ ಪ್ರದೇಶದ ಮಾಹಿತಿದಾರರ ಮಕ್ಕಳು ಸರ್ಕಾರದ ವಿವಿಧ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವುದರ ಕುರಿತು ಅಧ್ಯಯನ ಮಾಡುವುದು.

**ಅಧ್ಯಯನದ ಸಮಸ್ಯೆಯ ಹೇಳಿಕೆ**

**ಬಂಜಾರ ಸಮುದಾಯದ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳು: ಒಂದು ಅಧ್ಯಯನ.**

**ಸಂಶೋಧನಾ ವಿಧಾನ**

ಈ ಅಧ್ಯಯನವು ಧಾರವಾಡ ಜಿಲ್ಲೆಯ ಐದು ತಾಲೂಕುಗಳಲ್ಲಿ

ಕಂಡುಬರುವ ಬಂಜಾರ ತಾಂಡಾಗಳಿಗೆ ಭೇಟಿ ನೀಡಿ ಸಮೀಕ್ಷಾ ವಿಧಾನದಿಂದ ಪ್ರಶ್ನಾವಳಿಗಳ ಮೂಲಕ ಬಂಜಾರ ಸಮುದಾಯದ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳಿಗೆ ಸಂಬಂಧಿಸಿದಂತೆ ಮಾಹಿತಿದಾರರ ಕುಟುಂಬದ ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸಲಾಯಿತು.

**ಮಾದರಿ ಆಯ್ಕೆ**

ಸಂಶೋಧನ ಅಧ್ಯಯನಕ್ಕೆ ಮಾಹಿತಿಯನ್ನು ಸಂಗ್ರಹಿಸಲು ಸರಳ ಯಾದೃಚ್ಚಿಕ (ರ್‍ಯಾಂಡಮ್) ಮಾದರಿಯ ವಿಧಾನವನ್ನು ಅನುಸರಿಸಲಾಯಿತು. ಧಾರವಾಡ ಜಿಲ್ಲೆಯ ಐದು ತಾಲೂಕುಗಳಲ್ಲಿ ವಾಸಿಸುತ್ತಿರುವ ತಾಂಡಾಗಳಿಂದ 500 ಮಾಹಿತಿದಾರರ ಕುಟುಂಬಗಳಿಂದ ಮಾಹಿತಿ ಸಂಗ್ರಹಿಸಲಾಯಿತು. ಅದರಲ್ಲಿ 300 ಗ್ರಾಮೀಣ ಪ್ರದೇಶ ಹಾಗೂ 200 ನಗರ ಪ್ರದೇಶದ ಮಾಹಿತಿದಾರರಿಂದ ಮಾಹಿತಿ ಪಡೆದುಕೊಳ್ಳಲಾಯಿತು.

**ಅಧ್ಯಯನದ ಇತಿಮಿತಿಗಳು**

- ಈ ಅಧ್ಯಯನವು ಧಾರವಾಡ ಜಿಲ್ಲೆಗೆ ಮಾತ್ರ ಸೀಮಿತವಾಗಿದೆ.
- ಪ್ರಸ್ತುತ ಅಧ್ಯಯನವು ಧಾರವಾಡ ಜಿಲ್ಲೆಯ ಬಂಜಾರ ಸಮುದಾಯದವರಿಗೆ ಮಾತ್ರ ಸಂಬಂಧಿಸಿದೆ.
- ಈಅಧ್ಯಯನವು ಧಾರವಾಡ ಜಿಲ್ಲೆಯ ಐದು ಬಂಜಾರ ತಾಂಡಾಗಳಿಗೆ ಸೀಮಿತವಾಗಿದೆ.
- ಈ ಅಧ್ಯಯನಕ್ಕೆ ಒಟ್ಟು 500 (ಗ್ರಾಮೀಣ 300, ನಗರ 200) ಮಾಹಿತಿದಾರರನ್ನು ಆಯ್ಕೆಮಾಡಿಕೊಳ್ಳಲಾಗಿದೆ.

**ಸಂಶೋಧನಾ ಅಧ್ಯಯನದ ವಿಶ್ಲೇಷಣೆ**

ಮಾಹಿತಿದಾರರು ಸರ್ಕಾರ ನೀಡುವ ಅನುದಾನ ಪಡೆದು ಶೌಚಾಲಯವನ್ನು ನಿರ್ಮಿಸಿಕೊಂಡಿರುವವರ ವಿವರ:

| ಪ್ರದೇಶವಾರು | ಗ್ರಾಮೀಣ | ಪ್ರತಿಶತ | ನಗರ | ಪ್ರತಿಶತ | ಒಟ್ಟು | ಪ್ರತಿಶತ |
|---|---|---|---|---|---|---|
| ಸೌಲಭ್ಯ ಪಡೆದವರು | 216 | 72 | 180 | 90 | 396 | 79.2 |
| ಸೌಲಭ್ಯ ವಂಚಿತರು | 84 | 28 | 20 | 10 | 104 | 20.8 |
| ಒಟ್ಟು | 300 | 100 | 200 | 100 | 500 | 100 |

(ಮೂಲ: ಕ್ಷೇತ್ರ ಅಧ್ಯಯನದಲ್ಲಿ ಸಂಗ್ರಹಿಸಿದ ಅಂಕಿ ಅಂಶಗಳ ವಿವರ)

ಈ ಮೇಲಿನ ಕೋಷ್ಠಕವನ್ನು ಗಮನಿಸಿದಾಗ, ಸರಕಾರದ ಅನುದಾನ ಪಡೆದು ಶೌಚಾಲಯಗಳನ್ನು ನಿರ್ಮಿಸಿಕೊಂಡಿರುವರ ವಿವರವನ್ನು ತಿಳಿಸುತ್ತದೆ. ಬಂಜಾರ ಸಮುದಾಯದವರು ಗ್ರಾಮೀಣ ಪ್ರದೇಶದಲ್ಲಿ ಶೇಕಡ 72 ರಷ್ಟು, ಮಾಹಿತಿದಾರರು ಶೌಚಾಲಯಗಳನ್ನು ಅನುದಾನ ಪಡೆದುಕೊಂಡು ನಿರ್ಮಿಸಿದ್ದಾರೆ, ನಗರ ಪ್ರದೇಶದಲ್ಲಿ ಶೇಕಡ 90 ರಷ್ಟು, ಮಾಹಿತಿದಾರರು ಸರಕಾರದ ಅನುದಾನ ಪಡೆದು ಶೌಚಾಲಯಗಳನ್ನು ನಿರ್ಮಿಸಿಕೊಂಡಿರುವುದು ಕಂಡುಬಂದಿದೆ. ಇನ್ನೂ ಗ್ರಾಮೀಣ ಪ್ರದೇಶದಲ್ಲಿ ಶೇಕಡ 28ರಷ್ಟು, ಮಾಹಿತಿದಾರರು ಈ ಯೋಜನೆಯಿಂದ ವಂಚಿತರಿರುವುದು ಕಂಡುಬಂದರೆ, ಶೇಕಡ 10 ರಷ್ಟು ಮಾಹಿತಿದಾರರು ನಗರ ಪ್ರದೇಶದಲ್ಲಿ ವಂಚಿತರಾಗಿದ್ದಾರೆ, ಒಟ್ಟಾರೆಯಾಗಿ ಅವಲೋಕಿಸಿದಾಗ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಶೇಕಡ 79.2 ರಷ್ಟು, ಮಾಹಿತಿದಾರರು ಸರಕಾರದ ಅನುದಾನ ಪಡೆದು ಶೌಚಾಯಗಳನ್ನು ನಿರ್ಮಿಸಿಕೊಂಡಿರುವುದು ಕಂಡು ಬಂದಿದೆ. ಶೇಕಡ 20.8 ರಷ್ಟು ಮಾಹಿತಿದಾರರು ಸೌಲಭ್ಯದಿಂದ ವಂಚಿತರಾಗಿದ್ದಾರೆ ಎಂದು ಹೇಳಬಹುದು.

ಬಂಜಾರ ಸಮುದಾಯದವರಿಗೆ ಕಸೂತಿ ಕಲೆಯ ಬಗ್ಗೆ ಇರುವ ಆಸಕ್ತಿಯ ವಿವರ:

| ಅಭಿಪ್ರಾಯ | ಆಸಕ್ತಿ ಇದೆ | ಪ್ರತಿಶತ | ಆಸಕ್ತಿ ಇಲ್ಲ | ಪ್ರತಿಶತ | ಒಟ್ಟು | ಪ್ರತಿಶತ |
|---|---|---|---|---|---|---|
| ಗ್ರಾಮೀಣ | 220 | 73.33 | 80 | 26.66 | 300 | 99.99 |
| ನಗರ | 80 | 40 | 120 | 60 | 200 | 100 |
| ಒಟ್ಟು | 300 | 60 | 200 | 40 | 500 | 100 |

(ಮೂಲ: ಕ್ಷೇತ್ರ ಅಧ್ಯಯನದಲ್ಲಿ ಸಂಗ್ರಹಿಸಿದ ಅಂಕಿ ಅಂಶಗಳ ವಿವರ)

ಈ ಮೇಲಿನ ಕೋಷ್ಠಕವನ್ನು ಗಮನಿಸಿದಾಗ ಧಾರವಾಡ ಜಿಲ್ಲೆಯಲ್ಲಿ ವಾಸವಿರುವ ಬಂಜಾರ ಸಮುದಾಯದವರು ತಮ್ಮ ಸಂಸ್ಕೃತಿಯ, ಸಂಪ್ರದಾಯದ ಕಸೂತಿ ಕಲೆಯ ಬಗ್ಗೆ ಇರುವ ಆಸಕ್ತಿಯನ್ನು ತಿಳಿಸುತ್ತದೆ. ಸಂಶೋಧನ ಅಧ್ಯಯನದ ಒಟ್ಟು ಮಾಹಿತಿದಾರರಲ್ಲಿ ಶೇಕಡ 73.33 ರಷ್ಟು, ಗ್ರಾಮೀಣ ಪ್ರದೇಶದ ಮಾಹಿತಿದಾರರು ಇಂದಿಗೂ ತಮ್ಮ ಸಂಪ್ರದಾಯದ ಕಸೂತಿ ಕಲೆಯಲ್ಲಿ ತೊಡಗಿಸಿಕೊಂಡಿರುವುದು ಕಂಡುಬರುತ್ತದೆ. ಹಾಗೆಯೇ ಶೇಕಡ 40 ರಷ್ಟು, ನಗರ ಪ್ರದೇಶದ ಮಾಹಿತಿದಾರರು ತಮ್ಮ ಸಂಪ್ರದಾಯದ ಕಸೂತಿ ಕಲೆಯಲ್ಲಿ ತೊಡಗಿಸಿಕೊಂಡಿರುವುದು ಕಂಡುಬರುತ್ತದೆ. ಇವರಲ್ಲಿ ಶೇಕಡ 26.66 ರಷ್ಟು, ಗ್ರಾಮೀಣ ಪ್ರದೇಶದ ಮಾಹಿದಾರರು ತಮ್ಮ ಕಸೂತಿ ಕಲೆಯ ಬಗ್ಗೆ ಅಷ್ಟಾಗಿ ಆಸಕ್ತಿಯಿಲ್ಲವೆಂದು ಹೇಳಿದರೆ, ಶೇಕಡ 60 ರಷ್ಟು, ನಗರ ಪ್ರದೇಶದ ಮಾಹಿತಿದಾರರು ಕಸೂತಿ ಕಲೆಯ ಬಗ್ಗೆ ಅಷ್ಟಾಗಿ ಆಸಕ್ತಿಯಿಲ್ಲವೆಂದು ತಿಳಿಸಿರುವುದು ಕ್ಷೇತ್ರಾಧ್ಯಯನದಿಂದ ಕಂಡುಬಂದಿದೆ. ಅಷ್ಟೇ ಅಲ್ಲದೇ ಮಹಿಳೆಯರು ಕಸೂತಿ ಕಲೆಯ ಬಗ್ಗೆ ಹೆಚ್ಚಿನ ಆಸಕ್ತಿವಹಿಸುವುದು ಅಗತ್ಯವಾಗಿದೆ.

ಮಾಹಿತಿದಾರರ ಪ್ರದೇಶಾವಾರು ವಯಸ್ಕರ ಶಿಕ್ಷಣದ ಸೌಲಭ್ಯಗಳ ವಿವರ:

| ಪ್ರದೇಶಾವಾರು | ಹೌದು | ಪ್ರತಿಶತ | ಇಲ್ಲ | ಪ್ರತಿಶತ | ಒಟ್ಟು | ಪ್ರತಿಶತ |
|---|---|---|---|---|---|---|
| ನಗರ | 140 | 70 | 60 | 30 | 200 | 100 |
| ಗ್ರಾಮೀಣ | 120 | 40 | 180 | 60 | 300 | 100 |
| ಒಟ್ಟು | 260 | 52 | 240 | 48 | 500 | 100 |

(ಮೂಲ: ಕ್ಷೇತ್ರ ಅಧ್ಯಯನದಲ್ಲಿ ಸಂಗ್ರಹಿಸಿದ ಅಂಕಿ ಅಂಶಗಳ ವಿವರ)

ಈ ಮೇಲಿನ ಕೋಷ್ಟಕವು ಬಂಜಾರ ಸಮುದಾಯದ ತಾಂಡಾಗಳಲ್ಲಿ ವಯಸ್ಕರರ ಶಿಕ್ಷಣದ ಬಗ್ಗೆ ಮಾಹಿತಿ ನೀಡುತ್ತದೆ. ಬಂಜಾರ ಸಮುದಾಯದ ಅನಕ್ಷರಸ್ಥರಿಗೆ ಅಕ್ಷರದ ಜ್ಞಾನ ಸಿಗಬೇಕಾದರೆ ಸರಕಾರವು ಪ್ರತಿಯೊಂದು ಹಳ್ಳಿಗಳಲ್ಲಿ ವಯಸ್ಕರರ ಶಿಕ್ಷಣ ಎಂಬ ಪರಿಕಲ್ಪನೆಯನ್ನು ಜಾರಿಗೆ ತಂದಿದೆ. ಈ ಪರಿಕಲ್ಪನೆಯ ಮೂಲಕ ಪ್ರತಿಯೊಬ್ಬರು ಅಕ್ಷರಸ್ಥರಾಗಬಹುದು. ಬಂಜಾರ ಸಮುದಾಯದ ತಾಂಡಾಗಳಲ್ಲಿ ಯಾವರೀತಿ ವಯಸ್ಕರರ ಶಿಕ್ಷಣದ ಸೌಲಭ್ಯವಿದೆ ಎನ್ನವುದರ ಬಗ್ಗೆ ಈ ಅಧ್ಯಯನದಿಂದ ತಿಳಿದುಕೊಳ್ಳಬಹುದು. ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಶೇಕಡ 70 ರಷ್ಟು, ಮಾಹಿತಿದಾರರು ನಗರ ಪ್ರದೇಶದಲ್ಲಿ ವಯಸ್ಕರರ ಶಿಕ್ಷಣದ ಸೌಲಭ್ಯವಿದೆ ಎಂದು ಹೇಳಿದರೆ, ಶೇಕಡ 30ರಷ್ಟು, ಮಾಹಿತಿದಾರರು ನಗರ ಪ್ರದೇಶದಲ್ಲಿ ವಯಸ್ಕರರ ಶಿಕ್ಷಣದ ಸೌಲಭ್ಯವಿಲ್ಲ ಎಂಬುವದನ್ನು ತಿಳಿಸಿದ್ದಾರೆ. ಹಾಗೆಯೇ ಶೇಕಡ 40 ರಷ್ಟು, ಮಾಹಿತಿದಾರರು ಗ್ರಾಮೀಣ ಪ್ರದೇಶದಲ್ಲಿ ವಯಸ್ಕರ ಶಿಕ್ಷಣದ ಸೌಲಭ್ಯವಿದೆ ಎಂದು ಹೇಳಿದ್ದಾರೆ. ಶೇಕಡ 60ರಷ್ಟು, ಮಾಹಿತಿದಾರರು ಗ್ರಾಮೀಣ ಪ್ರದೇಶದಲ್ಲಿ ವಯಸ್ಕರ ಶಿಕ್ಷಣದ ಸೌಲಭ್ಯವಿಲ್ಲ ಎಂದು ತಿಳಿಸಿರುತ್ತಾರೆ. ಈ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಶೇಕಡ 70 ರಷ್ಟು, ಮಾಹಿತಿದಾರರು ನಗರ ಪ್ರದೇಶದಲ್ಲಿ ವಯಸ್ಕರರ ಸೌಲಭ್ಯ ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿದೆ. ಹಾಗಾಗಿ ಸರಕಾರವು ಈ ವಯಸ್ಕರ ಶಿಕ್ಷಣದ ಸೌಲಭ್ಯವನ್ನು ಗ್ರಾಮೀಣ ಪ್ರದೇಶದಲ್ಲಿ, ಹೆಚ್ಚಾಗಿ ಬಂಜಾರ ತಾಂಡಾಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಶಿಬಿರಗಳನ್ನು ಹಮ್ಮಿಕೊಂಡು ಬಂಜಾರ ಸಮುದಾಯವನ್ನು ಸುಶಿಕ್ಷಿತರನ್ನಾಗಿ ಹಾಗೂ ಅಕ್ಷರಸ್ಥರನ್ನಾಗಿ ಮಾಡಬೇಕೆಂದು ಬಂಜಾರ ಸಮುದಾಯದ ಬಯಕೆಯಾಗಿದೆ.

ಬಂಜಾರ ಸಮುದಾಯದ ಮಕ್ಕಳು ಸರಕಾರದ ವಿವಿಧ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವದರ ವಿವರ:

| ವಸತಿ ಶಾಲೆಗಳು | ನಗರ | ಪ್ರತಿಶತ | ಗ್ರಾಮೀಣ | ಪ್ರತಿಶತ | ಒಟ್ಟು | ಪ್ರತಿಶತ |
|---|---|---|---|---|---|---|
| ಮೂರಾರ್ಜಿ ವಸತಿ ಶಾಲೆ | 65 | 32.5 | 170 | 56.66 | 235 | 47 |
| ನವೋದಯ ವಸತಿ ಶಾಲೆ | 45 | 22.5 | 10 | 3.33 | 55 | 11 |
| ಕಿತ್ತೂರು ಚನ್ನಮ್ಮ ವಸತಿ ಶಾಲೆ | 25 | 12.5 | 25 | 8.33 | 50 | 10 |
| ಸೈನಿಕ ವಸತಿ ಶಾಲೆ | 10 | 5 | 15 | 5 | 25 | 5 |
| ಇತರೆ | 55 | 27.5 | 80 | 26.66 | 135 | 27 |
| ಒಟ್ಟು | 200 | 100 | 300 | 99.98 | 500 | 100 |

(ಮೂಲ: ಕ್ಷೇತ್ರ ಅಧ್ಯಯನದಲ್ಲಿ ಸಂಗ್ರಹಿಸಿದ ಅಂಕಿ ಅಂಶಗಳ ವಿವರ)

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಬಂಜಾರ ಸಮುದಾಯದ ಮಕ್ಕಳು ಸರ್ಕಾರದ ವಿವಿಧ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವದರ ಬಗ್ಗೆ ಮಾಹಿತಿ ತಿಳಿಸುತ್ತದೆ. ಶೇಕಡ 32.5 ರಷ್ಟು, ನಗರ ಪ್ರದೇಶದ ಮಾಹಿತಿದಾರರ ಮಕ್ಕಳು ಮೂರಾರ್ಜಿ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದರೆ, ಶೇಕಡ 22.5 ರಷ್ಟು, ನಗರ ಪ್ರದೇಶದ ಮಾಹಿತಿದಾರರ ಮಕ್ಕಳು ನವೋದಯ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವುದು ಕಂಡು ಬಂದರೆ, ಶೇಕಡ 12.5 ರಷ್ಟು, ನಗರ ಪ್ರದೇಶದ ಮಾಹಿತಿದಾರರ ಮಕ್ಕಳು ಕಿತ್ತೂರು ಚನ್ನಮ್ಮ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವುದು ತಿಳಿದು ಬಂದಿದೆ. ಶೇಕಡ 5ರಷ್ಟು, ನಗರ ಪ್ರದೇಶದ ಮಾಹಿತಿದಾರರ ಮಕ್ಕಳು ಸೈನಿಕ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಶೇಕಡ 27.5 ರಷ್ಟು, ನಗರ ಪ್ರದೇಶದ ಮಾಹಿತಿದಾರರ ಮಕ್ಕಳು ಸರ್ಕಾರದ ವಿವಿಧ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವುದು ಅಧ್ಯಯನದಿಂದ ತಿಳಿದು ಬಂದಿದೆ. ಹಾಗೆಯೇ ಶೇಕಡ 56.66 ರಷ್ಟು, ಗ್ರಾಮೀಣ ಪ್ರದೇಶದ ಮಾಹಿತಿದಾರರ ಮಕ್ಕಳು ಮೂರಾರ್ಜಿ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಶೇಕಡ 3.33 ರಷ್ಟು, ಗ್ರಾಮೀಣ ಪ್ರದೇಶದ ಮಾಹಿತಿದಾರರ ಮಕ್ಕಳು ನವೋದಯ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವುದು ಕಂಡುಬಂದರೆ, ಶೇಕಡ 8.33 ರಷ್ಟು, ಗ್ರಾಮೀಣ ಪ್ರದೇಶದ ಮಾಹಿತಿದಾರರ ಮಕ್ಕಳು ಕಿತ್ತೂರ ಚನ್ನಮ್ಮ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ, ಶೇಕಡ 5ರಷ್ಟು, ಗ್ರಾಮೀಣ ಪ್ರದೇಶದ ಮಾಹಿತಿದಾರರ ಮಕ್ಕಳು ಸೈನಿಕ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವುದು ಕಂಡು ಬಂದರೆ, ಶೇಕಡ 26.66 ರಷ್ಟು, ಗ್ರಾಮೀಣ ಪ್ರದೇಶದ ಮಾಹಿತಿದಾರರ ಮಕ್ಕಳು ಸರಕಾರದ ವಿವಿಧ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವುದು ಅಧ್ಯಯನದಿಂದ ತಿಳಿದು ಬಂದಿದೆ. ಒಟ್ಟಾರೆಯಾಗಿ ಶೇಕಡ 47 ರಷ್ಟು, ಮಾಹಿತಿದಾರರ ಮಕ್ಕಳು ಮೂರಾರ್ಜಿ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವುದು ತಿಳಿದು ಬಂದಿದೆ, ಶೇಕಡ 11 ರಷ್ಟು, ಮಾಹಿತಿದಾರರ ಮಕ್ಕಳು ನವೋದಯ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವುದು ಕಂಡುಬಂದರೆ, ಶೇಕಡ 10 ರಷ್ಟು, ಮಾಹಿತಿದಾರರ ಮಕ್ಕಳು ಕಿತ್ತೂರ ಚನ್ನಮ್ಮ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವುದು ತಿಳಿದು ಬಂದಿದೆ, ಶೇಕಡ 5 ರಷ್ಟು, ಮಾಹಿತಿದಾರರ ಮಕ್ಕಳು ಸೈನಿಕ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವದು ಕಂಡು ಬಂದರೆ, ಶೇಕಡ 27 ರಷ್ಟು, ಮಾಹಿತಿದಾರರ ಮಕ್ಕಳು ಸರಕಾರದ ವಿವಿಧ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವುದು ಅಧ್ಯಯನದ ಮುಖಾಂತರ ತಿಳಿದು ಬಂದಿದೆ ಎಂದು ಹೇಳಬಹುದು.

**ಸಂಶೋಧನಾ ಅಧ್ಯಯನದ ಫಲಿತಗಳು**

- ಬಂಜಾರ ಸಮುದಾಯದವರು ಸರ್ಕಾರದ ಹಲವಾರು ಸೌಲಭ್ಯಗಳನ್ನು ಪಡೆಯುತ್ತಿರುವುದು ಕಂಡುಬಂದಿದೆ. ಸರ್ಕಾರದ ಹಲವಾರು ಸೌಲಭ್ಯಗಳಲ್ಲಿ ಒಂದಾದ ಶೌಚಾಲಯಗಳ ನಿರ್ಮಾಣದಲ್ಲಿ ನಗರ ಪ್ರದೇಶದ ಶೇಕಡ 90ರಷ್ಟು, ಮಾಹಿತಿದಾರರು ಸರ್ಕಾರದ ಅನುದಾನ ಪಡೆದು ಶೌಚಾಲಯಗಳನ್ನು ನಿರ್ಮಿಸಿಕೊಂಡಿರುವುದು ತಿಳಿದು ಬ ಂದಿದೆ. ಅದೇ ರೀತಿ ಗ್ರಾಮೀಣ ಪ್ರದೇಶದ ಶೇಕಡ 72ರಷ್ಟು, ಮಾಹಿತಿದಾರರು ಸರ್ಕಾರದ ಅನುದಾನ ಪಡೆದು ಶೌಚಾಲಯಗಳನ್ನು ನಿರ್ಮಿಸಿಕೊಂಡಿರುವುದು ಕಂಡುಬಂದಿದೆ.
- ಬಂಜಾರ ಸಮುದಾಯದವರು ತಮ್ಮ ಸಂಸ್ಕೃತಿಯ, ಸಂಪ್ರದಾಯದ ಕಸೂತಿ ಕಲೆಯ ಬಗ್ಗೆ ಇರುವ ಆಸಕ್ತಿಯನ್ನು ತಿಳಿಸುತ್ತದೆ. ಶೇಕಡ 73.33 ರಷ್ಟು, ಗ್ರಾಮೀಣ ಪ್ರದೇಶದ ಮಾಹಿತಿದಾರರು ತಮ್ಮ ಕಸೂತಿ ಕಲೆಯ ಬಗ್ಗೆ ಆಸಕ್ತಿ ಹೊಂದಿರುವುದು ಕಂಡು ಬಂದಿದೆ. ಹಾಗೆಯೇ ಶೇಕಡ 40 ರಷ್ಟು, ನಗರ ಪ್ರದೇಶದ ಮಾಹಿತಿದಾರರು ತಮ್ಮ ಕಸೂತಿ ಕಲೆಯ ಬಗ್ಗೆ ಆಸಕ್ತಿ ಹೊಂದಿರುವುದು ತಿಳಿದು ಬಂದಿದೆ.
- ವಯಸ್ಕರರ ಶಿಕ್ಷಣವು ಪ್ರತಿಯೊಬ್ಬ ವ್ಯಕ್ತಿಯನ್ನು ಅಕ್ಷರಸ್ಥರನ್ನಾಗಿ ಮಾಡುವ ಉದ್ದೇಶವನ್ನು ಹೊಂದಿದೆ. ಶೇಕಡ 70 ರಷ್ಟು, ನಗರ ಪ್ರದೇಶದಲ್ಲಿ ವಯಸ್ಕರರ ಶಿಕ್ಷಣದ ಸೌಲಭ್ಯವಿರುವುದು ಕಂಡು ಬಂದಿದೆ. ಅದೇ ರೀತಿ ಶೇಕಡ 40 ರಷ್ಟು, ಗ್ರಾಮೀಣ ಪ್ರದೇಶದಲ್ಲಿ ವಯಸ್ಕರರ ಶಿಕ್ಷಣದ ಸೌಲಭ್ಯವಿರುವುದು ಕಂಡು ಬಂದಿದೆ. ಬಂಜಾರ ಸಮುದಾಯವನ್ನು ಸುಶಿಕ್ಷಿತರನ್ನಾಗಿ ಹಾಗೂ ಅಕ್ಷರಸ್ಥರನ್ನಾಗಿ ಮಾಡುವುದು ಬಂಜಾರರ ಬಯಕೆಯಾಗಿದೆ. ವಯಸ್ಕರರ ಶಿಕ್ಷಣದ ಮೂಲಕ ಬಂಜಾರ ಸಮುದಾಯದ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ.
- ಬಂಜಾರ ಸಮುದಾಯದ ಮಕ್ಕಳು ಸರ್ಕಾರದ ವಿವಿಧ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವುದು ಕಂಡುಬಂದಿದೆ. ಶೇಕಡ 47 ರಷ್ಟು, ನಗರ ಮತ್ತು ಗ್ರಾಮೀಣ ಪ್ರದೇಶದ ಮಾಹಿತಿದಾರರ ಮಕ್ಕಳು ಮೂರಾರ್ಜಿ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವುದು ಕಂಡು ಬಂದಿದೆ. ಅದೇ ರೀತಿ ಶೇಕಡ 11 ರಷ್ಟು, ನಗರ ಮತ್ತು ಗ್ರಾಮೀಣ ಪ್ರದೇಶದ ಮಾಹಿತಿದಾರರ ಮಕ್ಕಳು ನವೋದಯ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವುದು ಕಂಡು ಬಂದಿದೆ. ಶೇಕಡ 27 ರಷ್ಟು, ನಗರ ಮತ್ತು ಗ್ರಾಮೀಣ ಪ್ರದೇಶದ ಮಾಹಿತಿದಾರರ ಮಕ್ಕಳು ಸರ್ಕಾರದ ಇತರೆ ವಸತಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವುದು ತಿಳಿದು ಬಂದಿದೆ.

**ಉಪಸಂಹಾರ**

ಬಂಜಾರ ಸಮುದಾಯದವರು ತಮ್ಮ ಪ್ರಾಚೀನ ಸಾಮಾಜಿಕ ಪದ್ಧತಿಗೆ ಹೆಚ್ಚಿನ ಆದ್ಯತೆಯನ್ನು ಇಂದಿಗೂ ನಿಡುತ್ತಿರುವುದು ಕಂಡುಬರುತ್ತದೆ. ಸ್ವಚ್ಛಭಾರತ ಅಭಿಯಾನದ ಅಡಿಯಲ್ಲಿಯ ಸರಕಾರದ ಅನುದಾನ ಪಡೆದುಕೊಂಡು ಮನೆಗೊಂದು ಶೌಚಾಲಯವನ್ನು ನಿರ್ಮಿಸಿಕೊಂಡಿರುತ್ತಾರೆ. ಇದರಿಂದ ಜನರಲ್ಲಿ ಸ್ವಚ್ಛತೆಯ ಬಗ್ಗೆ ಹೆಚ್ಚಿನ ಅರಿವು ಮೂಡಿರುವುದಯ ಕಂಡು ಬರುತ್ತದೆ. ಬಂಜಾರ ಸಮುದಾಯದವರು ಯಾವುದೇ ಆಧುನಿಕ ಪ್ರಭಾವಕ್ಕೆ ಒಳಗಾಗದೆ ತಮ್ಮ ಸಂಸ್ಕೃತಿ, ಸಂಪ್ರದಾಯ ಕಸೂತಿ ಕಲೆಗೆ ಹೆಚ್ಚಿನ ಪ್ರಮಾಣದಲ್ಲಿ ಮಹತ್ವ ನೀಡುತ್ತಿರುವುದು ತಿಳಿದುಬಂದಿದೆ. ಮುಂದುವರೆದ ಸಮಾಜದ ಮಕ್ಕಳ ಹಾಗೆಯೇ ಬಂಜಾರ ಸಮುದಾಯದ ಮಕ್ಕಳು ಉನ್ನತ ಶಿಕ್ಷಣ ಪಡೆಯುತ್ತಿದ್ದು ಸಮುದಾಯವನ್ನು ಮುಖ್ಯವಾಹಿನಿಗೆ ತರಲು ಪ್ರಯತ್ನಿಸುತ್ತಿರುವುದು ಹಾಗೂ ಸರ್ಕಾರದ ಹಲವಾರು ಯೋಜನೆಗಳ ಪ್ರಯೋಜನ ಪಡೆಯುತ್ತಿರುವುದು ಬಂಜಾರ ಸಮುದಾಯದ ಪ್ರಗತಿಗೆ ನಾಂದಿಯಾಗಿದೆ. ಸಮುದಾಯದ ಪ್ರತಿ ಮಗುವಿಗೆ ಗುಣಮಟ್ಟದ ಶಿಕ್ಷಣ ದೊರೆಯುವಂತೆ ಸಮುದಾಯದ ವಿದ್ಯಾವಂತರು, ನಾಯಕರು ಮಾರ್ಗದರ್ಶನ ಮಾಡಬೇಕು. ಇದರಿಂದ ಸಮುದಾಯವನ್ನು ಸಂಪೂರ್ಣ ಅಕ್ಷರಸ್ಥರನ್ನಾಗಿ ಮಾಡುವ ಕಡೆಗೆ ಗಮನಹರಿಸಬೇಕು.

**ಆಧಾರ ಗ್ರಂಥಗಳು**


1. ಡಾ. ಪವಾರ ಹರಿಲಾಲ್ (1996). ಲಂಬಾಣಿ ಮದುವೆ ಸಂಪ್ರದಾಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2. ಡಾ.ಪಿ.ಕೆ.ಖಂಡೋಬಾ (2000). 'ಕರ್ನಾಟಕದ ಬುಡಕಟ್ಟಿನ ಲಂಬಾಣಿಗಳು' ಶ್ರೀ ಸಿದ್ದಲಿಂಗೇಶ್ವರ ಬುಕ್ ಡಿಪೋ, ಗುಲ್ಬರ್ಗಾ.
3. ಡಾ. ಪಂಡಿತ ಕೆ. ರಾಠೋಡ (2016). ಬಂಜಾರ ಸಂಸ್ಕೃತಿ ಅಧ್ಯಯನ, ಶುಭಚಂದ್ರ ಪ್ರಕಾಶನ ಧಾರವಾಡ.
4. ಜಾಧವ್ ಶ್ರೀಕಾಂತ ಆರ್ (2017). ಬಂಜಾರ ಸಂಕತನ, ಶಾಂತಾರಾಮ್ ಪ್ರಕಾಶನ, ಅಮೀನಗಡ ಬಾಗಲಕೋಟ.
5. ಲೋಕೇಶ್ ನಾಯ್ಕ್ ಬಿ (2020). ಕರ್ನಾಟಕದಲ್ಲಿ ಲಂಬಾಣಿ ಸಮುದಾಯದ ಮಹಿಳಾ ಸಬಲಿಕರಣದಲ್ಲಿ ಶಿಕ್ಷಣದ ಪಾತ್ರ (ಚಿಕ್ಕಮಗಳೂರು ಜಿಲ್ಲೆಯನ್ನು ಅನುಲಕ್ಷಿಸಿ), ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ತುಮಕೂರು ವಿಶ್ವವಿದ್ಯಾಲಯ; ತುಮಕೂರು.